ಸಿಸಿ 320/2014

ಚಾಸಾ - 7

ಫ್ರಾಸಾ -4

ದಿ : **06.10.2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮಧ್ಯಕಾಲೀನ ಅರ್ಜಿಯ ಆದೇಶದಂತೆ ಸಾಕ್ಷಿಯನ್ನು ಪುನಃ ಕರೆಸಲಾಯಿತು. ಚಾಸಾ 5 ಮರಿಲಿಂಗೇಗೌಡ, ವಲಯ ಅರಣ್ಯಾಧಿಕಾರಿಗಳು, ತೀರಿಕೊಂಡಿದ್ದು ಅವರೊಂದಿಗೆ ಕೆಲಸ ಮಾಡಿದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಚಾಸಾ 7 ರವರು ಚಾಸಾ 5 ರವರು ತನಿಖೆ ಮಾಡಿದ ವಿಚಾರವಾಗಿ ಸಾಕ್ಷ್ಯ ನುಡಿಯಲು ಹಾಜರಾಗಿರುತ್ತಾರೆ.

**ಮುಂದುವರೆದ ಮುಖ್ಯ ವಿಚಾರಣೆ : ಮಾನ್ಯ ಎಪಿಪಿಯವರಿಂದ**

ನಾನು ಬಂಡೀಪುರ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದಾಗ ನನ್ನ ಅಧೀನದಲ್ಲಿ ಚಾಸಾ 5 ಮದ್ದೂರು ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಚಾಸಾ 5 ಹಾಲಿ ತೀರಿಕೊಂಡಿರುತ್ತಾರೆ. ಅವರು ಕರ್ತವ್ಯದಲ್ಲಿದ್ದಾಗ ಮೊಕದ್ದಮೆ ಸಂಖ್ಯೆ 7/2008-09 ರ ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ದಿಃ 01.12.2008 ರಂದು ಕೇರಳಕ್ಕೆ ಸಿಬ್ಬಂದಿಯೊಡನೆ ಹೋಗಿ ಈ ಕೇಸಿನ ಬಗ್ಗೆ ಅರಣ್ಯ ಅಧಿಕಾರಿಗಳ ಜೊತೆ ಚರ್ಚಿಸಿ ಆರೋಪಿ 1 ರಿಂದ 4 ರವರನ್ನು ಕೇರಳ ರಾಜ್ಯದ ಅರಣ್ಯ ಅಧಿಕಾರಿಗಳು ಮಾನ್ಯ ನ್ಯಾಯಾಲಯದ ಬಂಧನಕ್ಕೆ ನೀಡಿದ್ದು ಮತ್ತು ಅಲ್ಲಿನ ಕಡತಗಳನ್ನು ನೀಡಿದ್ದು, ಈ ಬಗ್ಗೆ ಅವರ ಬಾಡಿ ವಾರೆಂಟನ್ನು ತೆಗೆದುಕೊಳ್ಳಲು ವಿಚಾರ ಮಾಡಿ ನಂತರ ಅಲ್ಲಿನ ಅರಣ್ಯ ಇಲಾಖೆಯ ದಾಖಲಾತಿಗಳಾದ ಮಹಜರ್ ಮತ್ತು ಸ್ವ ಇಚ್ಛಾ ಹೇಳಿಕೆಗಳನ್ನು ಕಾನೂನು ಪ್ರಕಾರ ತಂದು ಅವುಗಳನ್ನು ನಮ್ಮ ಕಛೇರಿಯಲ್ಲಿ ಅರಣ್ಯ ವೀಕ್ಷಕನಾಗಿದ್ದ ಪ್ರೇಮ್ ದಾಸ್ ರವರ ಮೂಲಕ ಮಲಯಾಳಂ ನಿಂದ ಕನ್ನಡಕ್ಕೆ ತರ್ಜುಮೆ ಮಾಡಿಸಿ ದಾಖಲೆಗಳನ್ನು ಸಲ್ಲಿಸಿಕೊಂಡಿರುತ್ತಾರೆ. ನಂತರ ಮಾನ್ಯ ಗುಂಡ್ಲುಪೇಟೆ ನ್ಯಾಯಾಲಯದಿಂದ ಆರೋಪಿ 1 ರಿಂದ 4 ರವರ ವಿರುದ್ಧ ಬಾಡಿ ವಾರೆಂಟನ್ನು ಪಡೆದು ನ್ಯಾಯಾಂಗ ಬಂಧನದಲ್ಲಿದ್ದ ನಾಲ್ಕು ಜನ ಆರೋಪಿಗಳನ್ನು ಸ್ಥಳ ಮಹಜರ್ ಮಾಡುವ ಉದ್ದೇಶದಿಂದ ಮದ್ದೂರಿಗೆ ಕರೆದುಕೊಂಡು ಬಂದು, ಆ ವೇಳೆಯಲ್ಲಿ ನಾಲ್ಕು ಜನ ಆರೋಪಿಗಳು ತಮ್ಮ ಕೃತ್ಯಗಳನ್ನು ಒಪ್ಪಿಕೊಂಡು ನನ್ನ ಮುಂದೆ ತಪ್ಪು ಒಪ್ಪಿಗೆ ಹೇಳಿಕೆ ನೀಡಿರುತ್ತಾರೆ. ಕೂಲಂಕುಷವಾಗಿ ವರದಿ ಸಲ್ಲಿಸಿ ನನಗೆ ಕಡತ ನೀಡಿರುತ್ತಾರೆ. ದಿಃ 17.12.2008 ರಂದು ಚಾಸಾ 1 ರವರೊಂದಿಗೆ ಸೇರಿ ನಿಪಿ 3 ರಂತೆ ಮಹಜರ್ ಮಾಡಿರುತ್ತಾರೆ. ಆ ವೇಳೆಯಲ್ಲಿ ಚಾಸಾ 5 ರವರು

ಹಾಜರಿದ್ದು ಸಹಿ ಮಾಡಿರುತ್ತಾರೆ. ನಾನು ಚಾಸಾ 5 ರವರೊಂದಿಗೆ ಕೆಲಸ ಮಾಡಿದ ಕಾರಣ ಅವರ ಸಹಿಯನ್ನು ಗುರ್ತಿಸಬಲ್ಲೆ. ಸಾಕ್ಷಿಯು ಚಾಸಾ 5 ರವರ ಸಹಿಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 3(ಐ) ಎಂದು ಗುರ್ತಿಸಲಾಯಿತು. ಅದೇ ರೀತಿ ದಿಃ 28.01.2009 ರಂದು ಮೇಲೆ ಹೇಳಿದಂತೆ ಚಾಸಾ 5 ರವರು ಕೇರಳ ಅರಣ್ಯ ಇಲಾಖೆಯವರಿಂದ ಆರೋಪಿಗಳು ಕೃತ್ಯಕ್ಕೆ ಬಳಸಿದ ಮು.ಮಾಗಳನ್ನು ಕಾನೂನು ಪ್ರಕಾರ ತಂದು ಮದ್ದೂರು ಅರಣ್ಯ ವಲಯ ಕಛೇರಿಯಲ್ಲಿ ನಿಪಿ 13 ರಂತೆ ಒಂದು ಪಂಚನಾಮೆ ಮಾಡಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ನಿಪಿ 13 ರಲ್ಲಿ ಚಾಸಾ 5 ರವರ ಸಹಿಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 13(ಬಿ) ಎಂದು ಗುರ್ತಿಸಲಾಯಿತು.

ನಂತರ ನಾನು ಚಾಸಾ 5 ರವರ ವರದಿಯಾಧಾರದ ಮೇರೆಗೆ ತನಿಖೆ ಮುಂದುವರೆಸಿ ನ್ಯಾಯಾಲಯಕ್ಕೆ ಆರೋಪಿಗಳ ವಿರುದ್ಧ ಒಂದು ನಿವೇದನೆಯನ್ನು ಸಲ್ಲಿಸಿಕೊಂಡಿರುತ್ತೇನೆ. ಅದೇ ದಿನ ವಿಚಾರಣಾ ವರದಿ ಸಲ್ಲಿಸಿರುತ್ತೇನೆ. ಸಾಕ್ಷಿಯು ನಿವೇದನೆಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 30 ಎಂದು, ಸಾಕ್ಷಿಯ ಸಹಿಯನ್ನು ನಿಪಿ 30(ಎ) ಎಂದು ಗುರ್ತಿಸಲಾಯಿತು. ವಿಚಾರಣಾ ವರದಿಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 31 ಎಂದು, ಸಾಕ್ಷಿಯ ಸಹಿಯನ್ನು ನಿಪಿ 31(ಎ) ಎಂದು ಗುರ್ತಿಸಲಾಯಿತು.

**ಪಾಟೀ ಸವಾಲು ಃ ದೋಷಾರೋಪಣಾ ರಚಿಸಿದ ನಂತರ ಪಾಟೀ ಸವಾಲು ಮಾಡುವುದಾಗಿ ಆರೋಪಿಗಳ ಪರ ವಕೀಲರು ನುಡಿದಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ಶಿವಕುಮಾರ ಜಿ.ಜೆ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ